## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.771/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ವೇಣುಗೋಪಾಲ್ | CW: 1 | PW: 1 |
| ತಂದೆಯ ಹೆಸರು | : | ಆರ್ . ರಂಗರಾಯಪ್ಪ | | |
| ವಯಸ್ಸು | : | 39 | | |
| ವೃತ್ತಿ | : | ಗ್ರಾಮ ಲೆಕ್ಕಾಧಿಕಾರಿ,<br>ಎರಗನಾಳು ಗ್ರಾಮ | | |
| ವಾಸಸ್ಥಳ | : | ಶಿವಮೊಗ್ಗ | | |

ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

2022 ರಿಂದ 2024 ರವರೆಗೆ ನ್ಯಾಮತಿ ತಾಲ್ಲೂಕು ಕಚೇರಿಯಲ್ಲಿ ಆಹಾರ ನಿರೀಕ್ಷಕರಾಗಿ ಕರ್ತವ್ಯ ಮಾಡಿರುತ್ತೇನೆ.

2 ನೇ ಆರೋಪಿ ಗೊತ್ತು. 1, 3 ಮತ್ತು 4 ನೇ ಆರೋಪಿತರು ಗೊತ್ತಿಲ್ಲ. ಚಾಸಾ 6 ಮತ್ತು 7 ರವರು ಗೊತ್ತು. ದಿಃ 06.10.2022 ರಂದು ರಾತ್ರಿ 9.50 ರ ಸಮಯದಲ್ಲಿ ನ್ಯಾಮತಿ ತಹಶೀಲ್ದಾರ್ ರವರು ದೂರವಾಣಿ ಕರೆಮಾಡಿ ನ್ಯಾಮತಿ ಪೋಲೀಸರು ಪಡಿತರ ಅಕ್ಕಿ ಮತ್ತು ಮೆಕ್ಕೆಜೋಳವನ್ನು ಅಮಾನತ್ತುಪಡಿಸಿಕೊಂಡು ಠಾಣೆಯಲ್ಲಿ ಇರಿಸಿದ್ದು ನ್ಯಾಮತಿ ಪೋಲೀಸ್ ಠಾಣೆಗೆ ಬನ್ನಿ ಎಂದು ನನ್ನನ್ನು ಕರೆದಿದ್ದು ರಾತ್ರಿ 11.15 ರ ಸಮಯಕ್ಕೆ ನಾನು ನ್ಯಾಮತಿ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಹೋಗಿ ನೋಡಲಾಗಿ ಒಂದು ಲಾರಿಯಲ್ಲಿ ಅಕ್ಕಿ ತುಂಬಿದ ಪ್ಲಾಸ್ಟಿಕ್ ಚೀಲದ ಮೂಟೆಗಳು ಇದ್ದು, ಅವು ಮೇಲ್ನೋಟಕ್ಕೆ ಪಡಿತರ ಅಕ್ಕಿಯಂತೆ ಗೊತ್ತಾಯಿತು. ಅಲ್ಲಿ 2

ನೇ ಆರೋಪಿ ಇದ್ದರು. ಸದರಿ ಅಕ್ಕಿಯು ಪಡಿತರ ಅಕ್ಕಿಯಂತೆ ಇದ್ದು ಅಕ್ರಮ ಸಾಗಾಟ ಮಾಡುತ್ತಿದ್ದಾರೆ ಎಂದು ನಾನು ರಾತ್ರಿ 2 ಗಂಟೆ ಸಮಯದಲ್ಲಿ ಪೋಲೀಸರಿಗೆ ದೂರು ನೀಡಿರುತ್ತೇನೆ. ಸದರಿ ಲಾರಿಯ ನಂಬರ್ ಕೆಎ 45/8367 ಆಗಿರುತ್ತದೆ.

ನಂತರ ಬೆಳಗ್ಗೆ 10 ರ ಸಮಯದಲ್ಲಿ ನಾನು ಪುನಃ ಪೋಲೀಸ್ ಠಾಣೆಗೆ ಹೋಗಿದ್ದು ಆಗ ಪೋಲೀಸರು ಅಕ್ಕಿ ಮತ್ತು ಮೆಕ್ಕೆಜೋಳಕ್ಕೆ ಸಂಬಂಧಿಸಿದಂತೆ ಮಹಜರ್ ಜರುಗಿಸಿ, 50 ಕೆ.ಜಿ ಯ 53 ಪ್ಲಾಸ್ಟಿಕ್ ಚೀಲದ ಅಕ್ಕಿ ಮೂಟೆಗಳು ಮತ್ತು 60 ಕೆ.ಜಿ ಯ 210 ಗೋಣಿ ಚೀಲದಲ್ಲಿ ತುಂಬಿದ ಮೆಕ್ಕೆಜೋಳದ ಪಾಕೆಟ್ ಗಳು ಇದ್ದವು. ಅದರಲ್ಲಿ ಪೋಲೀಸರು 5 ಚೀಲಗಳಲ್ಲಿ ತಲಾ 1 ಕೆ.ಜಿ ಅಕ್ಕಿಯನ್ನು  ಪರೀಕ್ಷೆಗಾಗಿ ಮಾದರಿ ತೆಗೆದುಕೊಂಡರು.  ಮಹಜರ್ ನ್ನು ಪೋಲೀಸರು ಬೆಳಗ್ಗೆ 10 ರಿಂದ 11.30 ರ ಸಮಯದಲ್ಲಿ ನನ್ನ, ಚಾಸಾ 6 ಮತ್ತು 7 ರವರ ಸಮಕ್ಷಮ ಜರುಗಿಸಿರುತ್ತಾರೆ. ನಂತರ ಪೋಲೀಸರು ನನ್ನನ್ನು ಮತ್ತು ಚಾಸಾ 6 ಮತ್ತು 7 ರವರನ್ನು ಮಲ್ಲಿಗೇನಹಳ್ಳಿ ಗ್ರಾಮದ 2 ನೇ ಆರೋಪಿಯ ಮನೆಯ ಕೆಳಗೆ ಗೋಡೋನ್ ಗೆ ಸುಮಾರು ಮಧ್ಯಾಹ್ನ 12 ಗಂಟೆಗೆ ಕರೆದುಕೊಂಡು ಹೋಗಿದ್ದು ಗೋಡೋನ್ ನಲ್ಲಿ ಪರಿಶೀಲನೆ ಮಾಡಲಾಗಿ 50 ಕೆ.ಜಿ ಯ ಪ್ಲಾಸ್ಟಿಕ್ ಚೀಲದ 70 ಅಕ್ಕಿ ಪಾಕೆಟ್ ಗಳು ಇದ್ದವು. ಸದರಿ ಅಕ್ಕಿ ಪಾಕೆಟ್ ಗಳ 5 ಅಕ್ಕಿ ಪಾಕೆಟ್ ಗಳಲ್ಲಿ ತಲಾ ಒಂದೊಂದು ಕೆ.ಜಿ ಅಕ್ಕಿಯನ್ನು ಪರೀಕ್ಷೆಗಾಗಿ ಮಾದರಿ ತೆಗೆದಿರುತ್ತಾರೆ. ಪೋಲೀಸರು ಮಹಜರ್ ಜರುಗಿಸಿ ನನ್ನಿಂದ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಅಕ್ಕಿ ಮತ್ತು ಮೆಕ್ಕೆಜೋಳದ ಪಾಕೇಟ್ ಗಳನ್ನು ಪೋಲೀಸರು ಅಮಾನತ್ತುಪಡಿಸಿಕೊಂಡು ಎಪಿಎಂಸಿ ಗೋಡೋನ್ ಗೆ ತೆಗೆದುಕೊಂಡು ಹೋಗಿರುತ್ತಾರೆ. ಜಿಲ್ಲಾಧಿಕಾರಿಗಳ ಆದೇಶದಂತೆ ಮೆಕ್ಕೆಜೋಳವನ್ನು 4 ನೇ ಆರೋಪಿಗೆ ಬಿಡುಗಡೆ ಮಾಡಿರುತ್ತೇನೆ.

ಆರೋಪಿಗಳು  ಗೈರು ಹಾಜರಿದ್ದು 2 ನೇ ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ದೂರನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದುಾರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತು ಪಂಚನಾಮೆ ಮತ್ತು ಆರೋಪಿ ತೋರಿಸಿದ ಸ್ಥಳ ಮತ್ತು ಅಮಾನತ್ತು ಪಂಚನಾಮೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅಮಾನತ್ತುಪಂಚನಾಮೆ ಮತ್ತು ಆರೋಪಿ ತೋರಿಸಿದ ಸ್ಥಳ ಮತ್ತು ಅಮಾನತ್ತು ಪಂಚನಾಮೆಗಳನ್ನು ನಿಪಿ 2 ಮತ್ತು 3 ಎಂದು,

ಸಾಕ್ಷಿಯ ಸಹಿಗಳನ್ನು ನಿಪಿ 2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ಅಮಾನತ್ತು ಪಂಚನಾಮೆ ಸಂದರ್ಭ ಕೆಎ 45/8367 ನಂಬರ್ ನ ಲಾರಿಯನ್ನು ಸಹ ಪೋಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. 2 ಪಂಚನಾಮೆಗಳ ಸಂದರ್ಭ ಪೋಲೀಸರು ಪೊಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ.

ಸಾಕ್ಷಿಯು 8 ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿಕೊಂಡಿದ್ದು, ಸದರಿ ಪೋಟೋಗಳನ್ನು ನಿಪಿ 4 ರಿಂದ 11 ಎಂದು, ಸಿಡಿಯನ್ನು ನಿಪಿ 12 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ– ಆರೋಪಿಗಳ ಪರ ಶ್ರೀ.ಎಂ ಆರ್ ಎಂ ವಕೀಲರಿಂದಃ–

ಆರೋಪಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದು ಸೂಕ್ತ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.